ಕೆಳಗ ಕುಂತಿರ್ತಾವ, ಮ್ಯಾಗ ನೀರಿರತ್ತ ಅಂತ. ಅದ್ನೆಲ್ಲಾ ಕೇಳಾಕ್ ನಂಗ್ ಒಂಥರಾ ಅನ್ಸುತ್ತಂಗೆ. ನೀ ಯಾಕ್ ಹೊಲಕ್ ಹೋಗಲ್ಲಬೇ?' ಅಂದಾಗ ಸಿಟ್ಟಿಗೆದ್ದ ರುಕ್ಮಮ್ಮ 'ಊರಾರ್ ಮಾತ್ ಕೇಳಿದ್ರ ಬಾಯಿಗ್ ಮಣ್ಣಕ್ಯಬೊಕ್ ನಾವೆಲ್ಲ. ಊರಾರ್ ಬಂದು ನಮ್ಮ್ ಬಾಳೇವು ಮಾಡ್ತಾರನು? ಕೈ ಬಾಯಿ ಚೆಂದಿರಾರಿಗ್ಯ ನಮ್ಮಂತಾರ ಬಾಳೇವು ಕಣ್ಣ್ ಕುಕ್ಕತೈತಂಗೆ. ನಾವು ನಮ್ಮ ಹೊಟ್ಟಿ ತುಂಬಸಬೆಕಂದ್ರ ಹೊಟ್ಟಿಬಟ್ಟಿ ಕಟ್ಟಿ ದುಡಿಬೇಕು. ಕೈಲಾಗದಂತ ನಿಮ್ಮಪ್ಪನ್ನ ಕಟ್ಟಿಗ್ಯಂಡು ಊರಮಂದಿ ಕೂಡ ಅನ್ನಿಸಿಗ್ಯಂತ ಬಾಳೇವು ಏಗಾದು ನನಿಗ್ಗೊತ್ತೈತಿ. ನನ್ ಸಂಕಟ ನನಿಗ್ಯ. ಊರ್ ಮಂದಿ ಮಾತ್ ಕೇಳ್ತಿಯನಲೇ ಸುಡುಗಾಡಿ ತಂದು' ಅಂತ ಅವ್ವ ಬೈದಿದ್ದು ನೆನಸ್ಕೊಂಡ್ರೆ ಮನೆಗೆ ಹೋಗೊದು ಬಿಟ್ಟು ಸಾಲಿಯೊಳಾಗಿರಬೇಕು ಅನ್ನಿಸ್ತಿತ್ತು.

ಅದ್ಯಾಕೊ ಅವ್ವಂಗೆ ಅಪ್ಪನ ಮೇಲೆ ಈಗೀಗ ಕೋಪ ಇರ್ತಿತ್ತು. ಮನಿಗೆ ಬರ್ತಿದ್ದ ಆ ಇಬ್ಬರೂ ಬಿಳಿ ಲುಂಗಿಯವರನ್ನ ನೋಡಿದ್ರೆ ಅವಳ ಕಣ್ಣು ಕೆಂಡದಂಗಾಗ್ತಿದ್ವು. ಮುಂಜೆನಾದ್ರ ಸಾಕು ಅವ್ವನ ಬೈಗುಳ ಮನೆತುಂಬಾ ಹರಡಿ ಕಿವಿ ಮುಚ್ಚಬೇಕನ್ನಿಸ್ತಿತ್ತು. ಆದ್ರ ಮೂಲ್ಯಾಗಿರ್ತಿದ್ದ ಕಸಬಾರಿಗೆ ನೆನಪಾಗಿ ದೇವರ ಮನಿ, ನೆಲ್ ಚೀಲದ್ ಕೋಣಿ ಎಲ್ಲಾ ಕಸ ಗೂಡಸಿ, ಅಪ್ಪ ಮಲಗಿರ್ತಿದ್ದ ಬಂಕದಾಗ ಅಪ್ಪನ ಹಾಸಿಗೆ ಹತ್ರ ಮಾತ್ರ ಬಿಟ್ಟು ಕಸ ಹೊಡಿಯೊ ಪ್ರತಿದಿನದ ಕೆಲಸ ಮುಗ್ಸಿ, ಮನೆಯಿಂದ ಸಾಲಿಗೆ ಓಡಿದಾಗ ಅದ್ಯಾವುದೊ ಸರಪಳಿ ಬಿಚ್ಚಿದಂತ ಅನುಭವ!

ಅಪ್ಪನಿಗಿದೆಲ್ಲಾ ರೂಢಿಯಾಗಿತ್ತು. ನಿದ್ದೆಯಿಲ್ಲದ ಕಣ್ಣಲ್ಲೇ ಅಪ್ಪ ಚಾದರ ಹೊದ್ದು ಮಲಗಿರ್ತಿದ್ದ. ಸಾಲಿಗೆ ಅಡಗಿ ಮಾಡಾಕ ಹೋಗ್ಬೇಕು ಅನ್ನೋ ಅವಸರದಲ್ಲಿರ್ತಿದ್ದ ಅವ್ವ, ಅಪ್ಪನಿಗೆ ಕೇಳಿಸುವಂಗ 'ಏಟೊತ್ತಾದ್ರು ಹಿಂಗ ಮಕ್ಕಂಡ್ರ ಮನಿಗೆ ದರಿದ್ರ ಹತ್ತಲಾರದ ಮತ್ತೆನಾಗುತ್ತ. ಆ ಗಂಗಮ್ಮನ ತ್ವಾಟದಾಗ ತೆಂಗಿನ ಪರಕಿ ಬಿದ್ದಾವಂತ. ಆಕಿಗ್ಯನ ಕೇಳಿ ಚೀಲದಾಗ ತುಂಬಿಕ್ಯಂಡು ಬಂದ್ರ ನಾಕದಿನ ಒಲಿ ಉರುವಾಕ ಬರ್ತೈತಿ. ಅಂತಾದು ಶಾಣೇತನ ಇಲ್ಲ ಇವಕ್ಕ. ಇದ್ದಿದ್ದ ಹೊಲ ಮಾರಾಕ ಕುಂತಿ ನನಿಗೆ ಹೇಳಲಾರದ, ಸಾಲ ಮಾಡಂತಾದ ಏನಿತ್ತು ನಿನಿಗೆ. ಇನ್ನ ಮಕ್ಕಳು ಮರಿ ಅದಾವಂಬಾದು ಖಬರಗೆಟ್ಟಯನು. ದೊಡ್ಡ ಮಗಳದು ಗೊಂಬಿ ಮದುವಿ ಮಾಡಿದಂಗ ಮಾಡಿ ಕುಂತಿ. ಕೊಳ್ಳಾಗ, ಕಾಲಾಗ ಜೋಗ್ಯಾರ ಸಾಮಾನ ಅಕ್ಯಂದು ಮದುವ್ಯಾತು ಹುಡುಗಿ. ಸಂಬಂಧಿಕರಂಬಾರು ನೋಡಿ ಆಡಿಕ್ಯಂತಾರ ಮದುವಿ ಮುಂಜೆಗೊದ್ರ ಮಕ ಕರ್ರಗ ಮಾಡಿಕ್ಯಂಡು ಹೋಗಿ ಬರಬೋಕು' ಅಂತ ಬೈಯ್ಯುತ್ತ ರೊಟ್ಟಿ ಮಾಡಿ ಸಾಲಿಗೆ ಹೋಗ್ತಿದ್ಲು. ಅವ್ವ ಅದೆಷ್ಟು ಅರಚಾಡಿದ್ರೂನು ಅಪ್ಪನ ಮೌನ ಹಾಗೆ ಇರ್ತಿತ್ತು.

ಆದ್ರೆ ಅದೊಂದು ದಿನ ರಾತ್ರಿ ಅಪ್ಪ ಕನಸಿನ್ಯಾಗ ಕನವರಿಸ್ತಿದ್ದ

'ಯವ್ವಾ...ನಾ ಬದಕಾಗಲ್ಲಂಗೆ... ನಾ ಬದಕಾಗಲ್ಲಂಗೆ

ಬಿಳಿ ಲುಂಗಿ ಬರ್ತಾವಂಗೆ

ಬಿಳಿ ಲುಂಗಿ ಬರ್ತಾವ

ಕುತಿಗೀಗಿ ಸುತ್ತರದು ಸಾಯಿಸ್ತಾವಂಗೆ

ಆ ಗ್ವಾಡಿ... ಮಣ್ಣು... ಹೊಲ... ಮನಿ ಎಲ್ಲ ತಗಂತಾರಂಗೆ

ಬಿಳಿಲುಂಗ್ಯಾಗ ಗಂಟು ಕಟ್ಟತಾರಂಗೆ

ಯಂಕಮ್ಮ ನಾ ಇನ್ನ... ಬದುಕಾಗಲ್ಲಮ್ಮೊ...'

ಅಪ್ಪ ಬಿಳಿ ಲುಂಗಿ ಅಂದಿದ್ದು ಕೇಳಿ ಎದಿ ಧಸಕ್ ಅಂದಂಗಾತು. ನನ್ನ ಕನಸಿನ್ಯಾಗೆಲ್ಲ ಓಡಿಸಿಗ್ಯಂತ ಬಂದು

'ನಿಮ್ಮಪ್ಪೆಲ್ಯದಾನ... ನಿಮ್ಮಪ್ಪೆಲ್ಯದಾನ?

ಮದುವ್ಯಾತ್ಯ ನನ್ನ?

ಇಲ್ಲಿ ಬಾ... ರಕ್ಕ ಕೊಡತ್ನು

ನಿಮ್ಮವ್ವೆಲ್ಯದಾಳ?'

ಅಂತ ಕನಸಿನಲ್ಲಿ ಕಾಡ್ತಿದ್ದ ಬಿಳಿ ಲುಂಗಿಗಳೆಲ್ಲ, ನನ್ನನ್ನ ಸುತ್ತುವರೆದು ಕೈಕಾಲನ್ನೆಲ್ಲ ಎಳೆದಾಡಿ, ಮನಸ್ಸಿಗೆ ಬಂದಲ್ಲೆಲ್ಲಾ ಮುಟ್ಟಿ, ಬಿಳಿ ಲುಂಗಿಯನ್ನ ಬಾಯಿಗೆ ತುರುಕಿದಂತಾಗಿ ಚಿಟ್ಟನೆ ಚೀರಿ, ಕನಸಿನಿಂದ ಹೆದರಿ ಎದ್ದು ಮನೆ ಮೂಲೆಯಲ್ಲಿ ಕೂತು, ಅವ್ವನಿಗೆ ಗೊತ್ತಾದ್ರೆ ಬೈತಾಳ ಅಂತ ಅತ್ತು ಮುಖ ಒರೆಸಿಕೊಂಡು ಸುಮ್ಮನಾಗುತ್ತಿದ್ದೆ.

ಈ ಬಿಳಿ ಲುಂಗಿಗಳು ಅಪ್ಪನ ಕನಸಿನ್ಯಾಗೂ ಬಂದು ಕಾಡಿದ್ದು ನೋಡಿ ಬಂಕದಾಗಿನ ಮೂಲಿಗೆ ಕೂತು ಬಾಗಿಲ ಕಡೆಗೆ ದಿಟ್ಟಿಸಿದೆ, ಅಲ್ಲಿ ಯಾರೂ ಇರಲಿಲ್ಲ!